2) ಇದರಲ್ಲಿ ಒಟ್ಟು 23-00 ಎಕರೆ ಮಂಜೂರಾಗಿರುತ್ತದೆ.

3) ಮಂಜೂರಾದ 23-00 ಎಕರೆಯ ಪೈಕಿ 16-00 ಎಕರೆ ವಿಸ್ತೀರ್ಣಕ್ಕೆ ನ್ಯಾಯಾಲಯದಲ್ಲಿ ದಾವೆ ಇರುತ್ತದೆ.

ಆ) ಇಲ್ಲ

ಇ) ಕರ್ನಾಟಕ ಅಪೀಲು ಮೇಲ್ಮನವಿ ಪ್ರಾಧಿಕಾರದ ಆದೇಶದ ದಿನಾಂಕ:7-10-2002ರ ವಿರುದ್ಧ ಸದರಿ ಟ್ರಸ್ಟ್‌ನವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ. 44196:02 ಸಲ್ಲಿಸಿದ್ದು, ಉಚ್ಚ ನ್ಯಾಯಾಲಯ ತನ್ನ ದಿನಾಂಕ: 16-12-2002ರ ಮಧ್ಯಾಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುತ್ತದೆ.

ಆದ್ದರಿಂದ ಟ್ರಸ್ಟ್‌ಗೆ ಜಮೀನು ಸ್ವಾಧೀನ ನೀಡಿರುವುದಿಲ್ಲ.

ಈ) ಸರ್ವೆ ನಂ.87ರಲ್ಲಿ ಒಟ್ಟು 27-37 ಎ.ಗುಂ. ಜಮೀನಿದ್ದು, ಈ ಪೈಕಿ 23-00 ಎಕರೆ ವಿಲೇಯಾಗಿದ್ದು ಹಾಲಿ ವಾಸ್ತವ ಸ್ಥಿತಿ ಈ ಕೆಳಕಂಡಂತಿರುತ್ತೆ.

4-00 ಮುರುಗೇಶ್ ಎಂಬುವರಿಗೆ ಮಂಜೂರಿ. ಹೋಸ ನಂ. 130 ಆಗಿದೆ.

15.05 ರಾಮರಾಜು ಇತರೆ 6 ಜನರಿಗೆ ಮಂಜೂರಾಗಿ ನಂ. 142 ರಿಂದ 149 ಆಗಿದೆ. ನಂತರ ರದ್ದಾಗಿದ್ದು ನ್ಯಾಯಾಲಯದಲ್ಲಿ ದಾವೆ ಇರುತ್ತೆ. ಅನುಭವದಲ್ಲಿ ಸುಮಾರು

1-00 ಎಕರೆ ಕಡಿಮೆ ಇರುತ್ತದೆ.

1.20 ರಾಮಕೃಷ್ಣ ಆಶ್ರಮ ಟ್ರಸ್ಟಿಗೆ ಮಂಜೂರಾಗಿದ್ದು 1-20 ರಲ್ಲಿ ಅನುಭವದಾರರಾಗಿರುತ್ತಾರೆ.

1.00 ಸರ್ಕಾರಿ ಪ್ರಾಥಮಿಕ ಶಾಲೆಗೆ ಮಂಜೂರಾಗಿದೆ

0.35 ಸ್ವಾತಿ ಎಜುಕೇಷನ್ ಟ್ರಸ್ಟಿಗೆಮಂಜೂರಾಗಿದ್ದು ರದ್ದಾಗಿದೆ, ಈ ಪಾಕಿ

0.15 ಗುಂಟೆ ಸರ್ವೆ ನಂ. 149 ರಲ್ಲಿ ಸೇರಿದೆ.

1.19 ಎಕರೆ ವೀರಭದ್ರಸ್ವಾಮಿ, ಬದ್ರ ಕಾಳಮ್ಮ ದೇವಾಲಯಗಳಿದ್ದು, ದೇವಾಲಯದ ಜಾತ್ರೆ ವಗೈರೆಗೆ ಉಪಯೋಗಿಸಲಾಗುತ್ತಿದೆ.

0.12 ಗುಂಟೆ ಮುನೇಶ್ವರ ದೇವಾಲಯ ಹಾಗೂ ಮರಗಳ ತೋಪು ಇರುತ್ತದೆ.

0.13 ಗುಂಟೆ ಪ್ರದೇಶದಲ್ಲಿ ಅನಾಥಾಶ್ರಮ ಇರುತ್ತದೆ.

0.01 ಗುಂಟೆ ಪ್ರದೇಶವನ್ನು ಅಪಾರ್ಟ್‌ಮೆಂಟಿನವರು ಒತ್ತುವರಿ ಮಾಡಿದ್ದು ನ್ಯಾಯಾಲಯದಲ್ಲಿದೆ.

3.12 ಎಕರೆ ಪ್ರದೇಶದಲ್ಲಿ ಸುಮಾರು 166 ಮನೆಗಳನ್ನು ಅಕ್ರಮವಾಗಿ ಕಟ್ಟಿದ್ದು 94-ಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಸಿಂಧನೂರು ರಾಜ್ಯ ಹೆದ್ದಾರಿ ಕಾಮಗಾರಿ

637 (984) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಧನೂರು ದಿಂದ ತೆಕ್ಕಲಕೋಟ ರಾಜ್ಯ ಹೆದ್ದಾರಿ ಕಾಮಗಾರಿಯ (ವಿಶ್ವ ಬ್ಯಾಂಕ್ ಯೋಜನೆ) ಯಾವ ಹಂತದಲ್ಲಿದೆ; ಯಾವ ತರಹದ ಕಾಮಗಾರಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ;

ಆ) ಈ ವರ್ಷದ ಎಲ್ ಆರ್ ಎಫ್ ಯೋಜನೆಯಲ್ಲಿ ಸಿಂಧನೂರಿನಿಂದ ಬಳ್ಳಾರಿ ಎಂಡಿಆರ್ ರಸ್ತೆಯ ಕಾಮಗಾರಿಗಳನ್ನು ತೆಗೆದುಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಯಾವಾಗ ಕಾಮಗಾರಿ ಆರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಆ) ವಿಶ್ವಬ್ಯಾಂಕ್ ಸಾಲದ ನೆರವಿನ ಯೋಜನೆಯಡಿ ಸಿಂಧನೂರಿನಿಂದ ತೆಕ್ಕಲಕೋಟೆ (ದೇವಿನಗರದವರೆಗೆ) ವರೆಗಿನ 43 ಕಿಮೀ. ಉದ್ದದ ರಸ್ತೆಯನ್ನು ಪುನಃಶ್ಚೇತನಗೊಳಿಸುವ ಕಾಮಗಾರಿಯಡಿಯಲ್ಲಿ ತೆಗೆದುಕೊಳ್ಳಲಾಗುವುದು.

ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್ ಆಧಾರದ ಮೇಲೆ ಟೆಂಡರ್ ಕರೆಯಲಾಗಿದೆ. ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ 19-3-2003 ರವರೆಗೆ ಕಾಲಾವಕಾಶ ನಿಗದಿ ಪಡಿಸಲಾಗಿದೆ.

ಆ) ಸಿಂಧನೂರಿನಿಂದ ಬಳ್ಳಾರಿ ರಸ್ತೆಯು ರಾಜ್ಯ ಹೆದ್ದಾರಿ ಆಗಿರುತ್ತದೆ. ಇದರ ಉದ್ದ 83.90 ಕಿಮೀ. ಇದನ್ನು ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಪುನಃಶ್ಚೇತನಗೊಳಿಸಲಾಗುವುದು. ಮೇ 2003ರಲ್ಲಿ ಗುತ್ತಿಗೆ ನೀಡಲಾಗುವುದು.

ರಾಯಚೂರಿನಿಂದ ಗಿಣಿಗೇರಾ ರಾಜ್ಯ ಹೆದ್ದಾರಿ ಕಾಮಗಾರಿ

638 (985) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ರಾಯಚೂರಿನಿಂದ ಗಿಣಿಗೇರಾ ರಾಜ್ಯಹೆದ್ದಾರಿಯ ಕಾಮಗಾರಿಗಳು ಯಾವ ಹಂತದಲ್ಲಿವೆ;

ಆ) ಸಿಂಧನೂರಿನಿಂದ ಪೂತ್ನಾಳ್ ವರೆಗೆ (22 ಕಿಮೀ) ರಸ್ತೆಯ ಎರಡನೇ ಹಂತದ ಕಾಮಗಾರಿ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

ಇ) ಸಿಂಧನೂರಿನಿಂದ ಗಂಗಾವತಿ ವರೆಗೆ ಎರಡನೇ ಹಂತದ ರಸ್ತೆ ಕಾಮಗಾರಿ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಆ) ರಾಯಚೂರು - ಬೂದುಗುಂವ ಕ್ರಾಸ್ (ಗಿಣಿಗೇರಾ ಹತ್ತಿರ) ರಸ್ತೆ ಕಾಮಗಾರಿಯನ್ನು ಮೂರು ಪ್ಯಾಕೇಜ್‌ಗಳಲ್ಲಿ ತೆಗೆದುಕೊಳ್ಳಲಾಗಿದೆ. ಈ ಮೂರು ಕಾಮಗಾರಿಗಳ ವಿವರ ಹಾಗೂ ಕಾಮಗಾರಿಗಳ ಹಂತ ಕೆಳಗಿನಂತಿದೆ.

ಪ್ಯಾಕೇಜ್ ಸಂಖ್ಯೆ ಹಾಗೂ ಹೆಸರು	ಉದ್ದ ಕಿಮೀ ಗಳಲ್ಲಿ	ಗುತ್ತಿಗೆ ಮೊತ್ತ	ಕಾಮಗಾರಿಯ ಹಂತ
U5 ಆಂದ್ರಪ್ರದೇಶ ಗಡಿಯಿಂದ ಕಲಮಲಾ ಕ್ರಾಸ್‌ವರೆಗೆ	31	28.56	ಕಾಮಗಾರಿಯನ್ನು ಜನವರಿ 2002 ರಲ್ಲಿ ಪ್ರಾರಂಭಿಸಿದ್ದು, 24 ತಿಂಗಳಲ್ಲಿ ಅಂದರೆ ಜನವರಿ 2004 ರ ಒಳಗೆ ಮುಗಿಸಲು ಅವಧಿ ನಿಗದಿಪಡಿಸಲಾಗಿದೆ.